ಈ) ನಿವೇಶನ ಪಡೆದು ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ಅರ್ಜಿದಾರರಿಗೆ ಸ್ವಾಧೀನಪತ್ರಗಳನ್ನು ನೀಡಲಾಗುತ್ತಿದೆ.

ಸೇಡಂ ತಾಲ್ಲೂಕಿನ ಕೆರೆಗಳನ್ನು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದು

2031 (2511) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 100 ಎಕರೆ ಗಿಂತಲೂ ಹೆಚ್ಚು ನೀರಾವರಿಯಾಗುವ ಕೆರೆಗಳನ್ನು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಪತ್ರ ವ್ಯವಹಾರ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಇಲಾಖೆಯವರು ಶಿಫಾರಸ್ಸು ಮಾಡಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು;

ಇ) ಈಗಲಾದರೂ ಸಹ ನೈಜಾಂ ಕಾಲದಲ್ಲಿ ನಿರ್ಮಾಣವಾಗಿರುವ ಈ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ದುರಸ್ತಿ ಮಾಡಿಸಿ ರೈತರಿಗೆ ನೀರಾವರಿ ಸೌಲಭ್ಯ ಒದಗುವಂತೆ ಮಾಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಹೌದು.

ಆ) 40 ಹೆಕ್ಟೇರುಗಳಿಗೂ ಅಂದರೆ 100 ಎಕರೆಗೂ ಕಡಿಮೆ ಆಚ್ಚುಕಟ್ಟು ಇರುವ ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ 100 ಎಕರೆಗೂ ಹೆಚ್ಚಿನ ಆಚ್ಚು ಕಟ್ಟು ಹೊಂದಿರುವ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವಶಕ್ಕೆ ಪಡೆಯುವ ಬಗ್ಗೆ, ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಇ) ಇಂತಹ ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿದ ನಂತರ, ಅನುದಾನದ ಲಭ್ಯತೆ ಮೇರೆಗೆ ದುರಸ್ಥಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಸೇಡಂ ಪುರಸಭೆಗೆ ಮಂಜೂರಾಗಿರುವ ರಿಂಗ್ ರಸ್ತೆ

2032 (2512) - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಪುರಸಭೆಗೆ 50.00 ಲಕ್ಷ ರೂ.ಗಳು ಮಂಜೂರಿಯಾಗಿ ಸುಮಾರು 2 ವರ್ಷಗಳ ಮೊದಲು ಕೆ.ಯು. ಡಬ್ಲ್ಯೂ ಎಸ್.ರವರು ಈ ಹಣದಿಂದ ರಿಂಗ್ ರಸ್ತೆ ಕೈಗೆತ್ತಿಕೊಂಡಿರುವುದು ನಿಜವಲ್ಲವೇ:

ಆ) ಅವಧಿ ಮೀರಿದರೂ ಸಹ ಇಲ್ಲಿಯವರೆಗೆ ಈ ರಸ್ತೆಯ ಕೆಲಸ ಪೂರ್ತಿಯಾಗದೇ ಸ್ಥಗಿತಗೊಂಡಿರಲು ಕಾರಣವೇನು?

ಇ) ಇದರ ಅಂದಾಜು ಮೊತ್ತ ಎಷ್ಟು: ಕಾಮಗಾರಿಯ ವಿವರಗಳೇನು: ಇಲ್ಲಯವರೆಗೆ ಮಾಡಿರುವ ಕೆಲಸಗಳೇನು: ಇಲ್ಲಿ ಅಂದಾಜು ಪತ್ರದಂತೆ ಮಾಡಿರುವ ಕಾಮಗಾರಿಗಳಾವುವು: ಖರ್ಚಾಗಿರುವ ಹಣ ಎಷ್ಟು: ಈ ಕಾಮಗಾರಿಯನ್ನು ಪೂರ್ತಿಗೊಳ್ಳದಿರಲು ಕಾರಣಗಳಾವುವು:

ಈ) ಒಂದು ವೇಳೆ ಮಧ್ಯದಲ್ಲಿ 100-200 ಅಡಿ ಯಾರಾದರೂ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರೆ ಎರಡು ಕಡೆಯಿಂದ ಮಾಡಿರುವ ರಸ್ತೆಯನ್ನು ಅಂದಾಜು ಪತ್ರದಂತೆ ಪೂರ್ತಿಗೊಳಿಸದಿರಲು ಕಾರಣಗಳಾವುವು:

ಉ) ಇಂತಹ ಮೇಲೆ ಕೈಗೊಳ್ಳುವ ಕ್ರಮವೇನು ಇದನ್ನು ಪೂರ್ತಿಗೊಳಿಸುವುದು ಯಾವಾದ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಸದರಿ ಕಾಮಗಾರಿಯ ಹತ್ತಿರದ ಜಮೀನಿನವರು 60 ಮೀಟರ್‌ನಷ್ಟು ಉದ್ದದ ರಸ್ತೆ ಕಾಮಗಾರಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ಇ) ಇದರ ಅಂದಾಜು ಮೊತ್ತ ರೂ. 50.00 ಲಕ್ಷಗಳಿದ್ದು, ಟೆಂಡರ್ ಪ್ರೀಮಿಯಂ ಶೇ. 30 ಸೇರಿ ಒಟ್ಟು ಕಾಮಗಾರಿಯ ಮೊತ್ತ ರೂ. 65.00 ಲಕ್ಷಗಲಾಗುತ್ತದೆ. ಸೇಡಂನಿಂದ ಚಿಂಚೋಳಿ ರಿಂಗ್ ರಸ್ತೆ ಒಟ್ಟು 3000 ಮೀ. ಉದ್ದವಿದ್ದು, ಇದರಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ಇರುವ 60 ಮೀ. ಉದ್ದವನ್ನು ಬಿಟ್ಟು ಉಳಿದ ಕೆಲಸ ಮುಗಿದಿರುತ್ತದೆ. ಇಲ್ಲಿಯವರೆಗೆ ರೂ. 60.76 ಲಕ್ಷಗಳು ಖರ್ಚಾಗಿರುತ್ತದೆ. ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಉಳಿದ 60 ಮೀ ಉದ್ದ ರಸ್ತೆ ಕಾಮಗಾರಿ ಸ್ಥಗಿತಗೊಂಡಿರುತ್ತದೆ.

ಈ) ನ್ಯಾಯಾಲಯ ತಡೆಯಾಜ್ಞೆಯಿಂದ ಸ್ಥಗಿತಗೊಂಡಿರುವ 60 ಮೀ. ಕಾಮಗಾರಿ ಬಿಟ್ಟು ಅಂದಾಜು ಪಟ್ಟಿಯಂತೆ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ.

ಉ) ಉದ್ಭವಿಸುವುದಿಲ್ಲ.

ನ್ಯಾಯಾಲಯದ ತಡೆಯಾಜ್ಞೆ ತೆರವು ಆದ ನಂತರ ಉಳಿದ ಕಾಮಗಾರಿಯನ್ನು ಕೈಗೊಂಡು ಪೂರ್ತಿಗೊಳಿಸಲಾಗುವುದು.

ಸೇಡಂ ಕ್ಷೇತ್ರದಲ್ಲಿ ಬಸ್ಸುಗಳ ಸಂಚಾರ ವ್ಯವಸ್ಥೆ

2033 (2513) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಚಿತ್ತಾಪೂರ ತಾಲ್ಲೂಕಿನ 1 ಗ್ರಾಮಗಳು 20 ತಾಂಡಾಗಳು ಸೇರಿ) ದಲ್ಲಿ ಈಶಾನ್ಯ ವಲಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಬಹುತೇಕ ಗ್ರಾಮಗಳಿಗೆ ಮೊದಲಿನಿಂದ ಓಡುತ್ತಿದ್ದ ಬಸ್ಸುಗಳನ್ನು ಸಹ ಸ್ಥಗಿತಗೊಳಿಸಿ, ನಾಗರೀಕರಿಗೆ ಅನಾನುಕೂಲ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೋಟ್ಯಾನುಗಟ್ಟಲೆ ರೂ.ಗಳು ಖರ್ಚು ಮಾಡಿ ಹೊಸ ರಸ್ತೆಗಳ ನಿರ್ಮಾಣ ಮಾಡಿದರೂ ಸಹ ಆ ಗ್ರಾಮಗಳಿಗೆ ಬಸ್ಸುಗಳ ಸಂಪರ್ಕ ಕಲ್ಪಿಸದೇ ನಾಗರೀಕರಿಗೆ ತೊಂದರೆಯುಂಟು ಮಾಡುತ್ತಿರುವುದು ನಿಜವಲ್ಲವೇ;